**ಪಿಡಬ್ಲೂ: 1** **ಅಸಲು ದಾವೆ ನಂ.849/2022**

**<u>ದಿನಾಂಕ 23-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲು: ಪ್ರತಿವಾದಿ ಪರ ವಕೀಲರಿಂದ:-</u>**

1. ದಾವಾ ಆಸ್ತಿ ಜಹಂಗೀರ್ ರವರ ಹೆಸರಿನಲ್ಲಿದೆ. ಸದರಿ ಆಸ್ತಿ ಹನುಮಂತಿ ರವರ ಹೆಸರಿನಲ್ಲಿದೆ ಎಂದರೆ ಸರಿ. ನಿಮಗೆ ಖರೀದಿ ಕರಾರು ಪತ್ರ ಬರೆದುಕೊಟ್ಟ ಜಹಂಗೀರ್ ರವರ ಮೇಲೆ ಈ ಕೇಸು ಹಾಕಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಖರೀದಿ ಮಾತುಕತೆ ಯಾವ ದಿನಾಂಕದಂದು, ಎಷ್ಟು ಮೊತ್ತಕ್ಕೆ ಆಗಿತ್ತು ಎಂದರೆ ಸಾಕ್ಷಿಯು ರೂ.3,68,000/- ಕ್ಕೆ ಮಾತುಕತೆ ಆಗಿತ್ತು ಎನ್ನುತ್ತಾರೆ. ನಾವು ಮಾತುಕತೆಯನ್ನು ಜಹಂಗೀರ್ ರವರೊಂದಿಗೆ ಮಾಡಿದ್ದೆವು, ದಿನಾಂಕ ಸಮಯ ನನಗೆ ಹೇಳಲು ಆಗುವುದಿಲ್ಲ. ಎಷ್ಟಕ್ಕೆ ಮಾತುಕತೆ ಆಗಿತ್ತು, ಹಣ ಯಾವತ್ತು ಕೊಟ್ಟಿರಿ ಎಂದರೆ ಸಾಕ್ಷಿಯು ರೂ.3,68,000/- ಕ್ಕೆ ಮಾತುಕತೆ ಆಗಿತ್ತು, ಪತ್ರ ಮಾಡಿಸಿಕೊಳ್ಳುವುದಕ್ಕಿಂತ ಮುಂಚೆ ಹಣ ಕೊಟ್ಟು ನಂತರ ಪತ್ರ ಮಾಡಿಸಿಕೊಂಡಿದ್ದೆವು.

2. ದಾವಾ ಆಸ್ತಿಯನ್ನು, ಪಹಣಿಯನ್ನು ನೋಡಿದ್ದೀರಾ, ಪಹಣಿ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ಪಹಣಿಯನ್ನು ನೋಡಿಲ್ಲ, ಯಾರ ಹೆಸರಿನಲ್ಲಿದೆ ಎಂದು ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಜಹಂಗೀರ್ ರವರು ಸಂಪೂರ್ಣ ಆಸ್ತಿಯ ಮಾಲೀಕನಲ್ಲ, ಅವರಿಗೆ ಮಾರಾಟ ಮಾಡುವ ಹಕ್ಕು ಇಲ್ಲ ಎಂದರೆ ಸಾಕ್ಷಿಯು ಅವರು ಜಿಪಿಎ ಮಾಡಿಸಿಕೊಂಡು, ನಮಗೆ ಖರೀದಿ ಪತ್ರ ಮಾಡಿಕೊಟ್ಟಿದ್ದಾರೆ, ಅವರವರ ನಡುವೆ ಹೇಗಿದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಆಸ್ತಿಯ ಸಂಪೂರ್ಣ ಮಾಲೀಕರು ಹನುಮಂತಿ ಇದ್ದು, ಅವರಿಗೆ ಮಾತ್ರ ಹಕ್ಕು ಇದೆ ಎಂದರೆ ಸರಿ. ನಿಮಗೆ ದಾವಾ ಆಸ್ತಿ ಖರೀದಿ ಮಾಡುವ ಹಕ್ಕು ಇಲ್ಲ ಎಂದರೆ ಸರಿಯಲ್ಲ.

3. ಹನುಮಂತಿರವರ ನಿಪಿ-1 ಕ್ಕೆ ಸಹಿ ಮಾಡಿದ್ದಾರಾ ಎಂದರೆ ಸಾಕ್ಷಿಯು ಅವರು ಜಿಪಿಎ ಮಾಡಿಕೊಟ್ಟಿದ್ದರು, ಸಹಿ ಮಾಡಿರಬಹುದು ಎನ್ನುತ್ತಾರೆ. ಹನುಮಂತಿ ರವರಿಗೆ ಓದು ಬರಹ ಬರುವುದಿಲ್ಲ, ಖರೀದಿ ರದ್ದತಿ ಪತ್ರ ಮಾಡಿಸುತ್ತೇನೆಂದು ಹೇಳಿ ಜಿಪಿಎ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಮೋಸ ಮಾಡಿಲ್ಲ ಸಾರ್, ಜಹಂಗೀರ್ ರವರು ಮೋಸ ಮಾಡಿರಬಹುದು ಎನ್ನುತ್ತಾರೆ. ಸದರಿ ಜಿಪಿಎ ಕಾನೂನು ಬಾಹಿರವಾಗಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**